# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಂದಾಯ ಅಧಿಕಾರಿಗಳ ಕಛೇರಿ, ಹೊರಮಾವು ಉಪ ವಲಯ,**
**ಮಹದೇವಪುರ ವಲಯ ಬೆಂಗಳೂರು-43.**

ಸಂಖ್ಯೆ.ಬಿಬಿಎಂಪಿ/ಸಕಂಅಹೊಉವ/(ಸಿಬ್ಬಂದಿ)ಪಿಆರ್/06/2020-21 ದಿನಾಂಕ: 19.12.2020

***ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/2020-21 ದಿನಾಂಕ:21/09/2020 ಹಾಗೂ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರು ದಿನಾಂಕ:-19.12.2020 ರಂದು ಹೊರಮಾವು ಉಪ-ವಿಭಾಗದ ರಾಮಮೂರ್ತಿನಗರ ವಾರ್ಡ್-26 ರ ಕಛೇರಿಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.***

**ಉಪಸ್ಥಿತರು:**

| ಕ್ರ.ಸಂ | ಹೆಸರು | ಹುದ್ದೆ | ಮೊ.ಸಂ |
|---|---|---|---|
| 1 | R. ಶ್ರೀ.ಬಸವ[illegible] ಚಾರಿ | ನೋಡಲ್ ಅಧಿಕಾರಿ ವಾರ್ಡ್ ನಂ-26 | |
| 2 | ಶ್ರೀಮತಿ.ಜ್ಯೋತಿಲಕ್ಷ್ಮಿ | ಸಹಾಯಕ ಕಂದಾಯ ಅಧಿಕಾರಿ ಹಾಗೂ ಕಾರ್ಯದರ್ಶಿ ಮತ್ತು ಸಂಚಾಲಕ್ಕರು | 9108201798 |
| 3 | ಶ್ರೀ. ಚಂದ್ರಶೇಖರ್ | ಸಹಾಯಕ ಕಾರ್ಯಪಾಲಕ ಅಭಿಯಂತರರು | 9844587466 |
| 4 | ಶ್ರೀ.ವಿಕ್ರಮ್ ಸಜ್ಜನ್ ಶೆಟ್ಟಿ | ಸಹಾಯಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿ ವಾರ್ಡ್ ನಂ-26 | 9739838297 |
| 5 | ಶ್ರೀ. ವಿಶ್ವನಾಥ್, | ಆರೋಗ್ಯ ಅಧಿಕಾರಿಗಳು, ವಾರ್ಡ್ ಸಂಖ್ಯೆ.26, | 9916609413 |
| 6 | ಶ್ರೀ. ಚಂದ್ರಕಲಾ | ಕಿರಿಯ ಆರೋಗ್ಯ ಪರಿವೀಕ್ಷಕರು | 9620101648 |
| 7 | ಶ್ರೀ. ಜಯರಾಮ್, | ಕಂದಾಯ ಅಧಿಕಾರಿ | 9663954692 |
| 8 | ಶ್ರೀ.ನಾರಯಣಸ್ವಾಮಿ | ಕಂದಾಯ ಅಧಿಕಾರಿ | 9880817752 |
| 9 | ಶ್ರೀ.ಚಿಟ್ಟಿಬಾಬು, ಸಹಾಯಕರು, | ಅರಣ್ಯ ಬಿ.ಬಿ.ಎಂ.ಪಿ | 9945430665 |
| | ಸಾರ್ವಜನಿಕರು | | |
| 10 | ಶ್ರೀ.ನಂಜಪ್ಪ | ಸರ್.ಎಂ.ವಿ ನಗರ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ | – |
| 11 | ಶ್ರೀ ಎಲಿಜಬೆತ್ | ಪುಣ್ಯಭೂಮಿ ವೆಲ್‌ಫೇರ್ ಅಸೋಸಿಯೇಷನ್ | – |
| 12 | ಶ್ರೀ.ಪನ್ನೀರ್ ಸೆಲ್ವಂ | ಎನ್.ಆರ್.ಐ ಬಡಾವಣೆ ವೆಲ್‌ಫೇರ್ ಅಸೋಸಿಯೇಷನ್ | – |
| 13 | ಶ್ರೀಮತಿ.ಗೀತಾ | ಪೂಜಾಗಾರ್ಡನ್ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ | – |
| 14 | ಶ್ರೀಮತಿ.ಉಷಾ, | ಮಂಜುನಾಥ ನಗರ ಬಡಾವಣೆ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ | – |
| 15 | ಶ್ರೀಮತಿ. ಶೈಲಜಾ | ಕಲ್ಕೆರೆ ಗ್ರಾಮ | – |

| | | | |
|---|---|---|---|
| 16 | ಶ್ರೀ. ಮಂಜುನಾಥ | ಕನಕನಗರ ಗ್ರಾಮ | – |
| 17 | ಶ್ರೀ. ಶಶಿಕುಮಾರ ಮತ್ತು ಆನಂದ | ಪುಣ್ಯಭೂಮಿ ವೆಲ್‌ಫೇರ್ ಅಸೋಸಿಯೇಷನ್ | – |
| 18 | ಶ್ರೀ. ಆರ್ಮುಗಂ | ಸರ್.ಎಂ.ವಿ ನಗರ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ | – |

ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚೆ:–

ಶ್ರೀ.ಎಲಿಜಭತ್ ಮತ್ತು ಶ್ರೀ. ಶಶಿಕುಮಾರ್ ಇತರರು, ಪುಣ್ಯ ಭೂಮಿ ವೆಲ್‌ಫೇರ್ ಅಸೋಸಿಯೇಷನ್:– ರವರು ಮಾತನಾಡಿ ಪುಣ್ಯ ಭೂಮಿಬ 5ನೇ ರಸ್ತೆಗೆ ಈಗಾಗಲೇ ಚರಂಡಿ ಕಾಮಗಾರಿ ಮುಗಿದಿದ್ದು ಸುಮಾರು ದಿನಗಳಾಗಿದ್ದು, ಇದುವರೆವಿಗೂ ರಸ್ತೆಗೆ ವೆಟ್‌ಮಿಕ್ಸ ಹಾಕಿರುವುದಿಲ್ಲ. ಈ ರಸ್ತೆಯಲ್ಲಿ ಓಡಾಡಲು ತುಂಬಾ ತೊಂದರೆಯಾಗುತ್ತಿದ್ದು, ಅಪಘಾತಗಳು ಸಹ ಸಂಭವಿಸುತ್ತಿದ್ದು, ಹಿಂದಿನ 2 ಸಭೆಗಳಲ್ಲಿ ಡಾಂಬರೀಕರಣ ಮಾಡುವ ಬಗ್ಗೆ ಕೋರಲಾಗಿದ್ದರೂ ಸಹ ಇದುವರೆವಿಗೂ ಡಾಂಬರೀಕರಣ ಮಾಡಲು ಗುತ್ತಿಗೆದಾರರ ವಿರುದ್ದ ಯಾವುದೇ ಕ್ರಮವಹಿಸದಿರುವ ಬಗ್ಗೆ ಅಸಮಧಾನ ವ್ಯಕ್ತಪಡಿಸಿ ದಿನಾಂಕ:30.12.2020 ರ ವರೆಗೆ ಅಂತಿಮ ಗಡುವು ನೀಡಿ ಈ ಅವಧಿಯ ಓಳಗೆ ಡಾಂಬರೀಕರಣ ಮಾಡಲು ಕೋರಿಕೊಂಡು ಸಭೆಯಲ್ಲಿ ತಿಳಿಸಿದರು.

ಕ್ರಮ:– ಹಾಜರಿದ್ದ ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ವಾರ್ಡ್ ಸಂಖ್ಯೆ 26 ರ ಸಹಾಯಕ ಅಭಿಯಂತರರು ಸಭೆಗೆ ತಿಳಿಸಿ ಗುತ್ತಿಗೆದಾರರಿಗೆ ವೆಟ್‌ಮಿಕ್ಸ ಹಾಕಿಕೊಡಲು ಸಭೆಯು ಸೂಚಿಸಿತು.

ಶ್ರೀ.ಆರ್ಮುಗಂ, ದಾಮೋದರನ್ ಮತ್ತು ಶ್ರೀ.ನಂಜಪ್ಪ ಸರ್.ಎಂ.ವಿ ನಗರ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್:– ರವರು ಮಾತನಾಡಿ ಸರ್.ಎಂ.ವಿ ನಗರ 8ನೇ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳು ಡಾಂಬರೀಕರಣ ಆಗದಿರುವ ಬಗ್ಗೆ ಹಾಗೂ ಗುತ್ತಿಗೆದಾರರಾದ ಶ್ರೀ.ವಸಂತ್‌ಕುಮಾರ್ ರವರಿಗೆ ನೋಟೀಸ್ ಜಾರಿಮಾಡಿ ಡಾಂಬರೀಕರಣ ಮಾಡಲು ಅಧಿಕಾರಿಗಳು ಕ್ರಮಕೈಗೊಳ್ಳಲು ಕೋರಿರುತ್ತಾರೆ.

ಕ್ರಮ:– ಸಹಾಯಕ ಕಾರ್ಯಪಾಲಕ ಅಭಿಯಂತರರು ಹೊರಮಾವು ಉಪ–ವಿಭಾಗ ರವರು ಕ್ರಮವಹಿಸಲು ಸಭೆಯು ಸೂಚಿಸಲಾಯಿತು.

ಶ್ರೀ ಮಂಜುನಾಥ ಕನಕನಗರ ಗ್ರಾಮ:– ರವರು ಮಾತನಾಡಿ ಈಗಾಗಲೇ ಕನಕನಗರ ಗ್ರಾಮದ ಮುಖ್ಯರಸ್ತೆ ಕನಕನಗರ ಸರ್ಕಾರಿ ಶಾಲೆಯ ಮುಂಬಾಗ ಅತಿವೇಗವಾಗಿ ವಾಹನಗಳು ಬರುತ್ತಿದ್ದು, ಅಪಘಾತಗಳು ಸಂಭವಿಸುತ್ತಿರುವುದರಿಂದ ಪರಿಶೀಲಿಸಿ ರಸ್ತೆಯ ಉಬ್ಬುಗಳನ್ನು ಅಳವಡಿಸಲು ಕೋರಿರುತ್ತಾರೆ.

ಕ್ರಮ:– ವಾರ್ಡ್ ಸಂಖ್ಯೆ 26 ರ ಸಹಾಯಲ ಅಭಿಯಂತರರು ಸಭೆಗೆ ತಿಳಿಸಿ ಸ್ಥಳ ಪರಿಸೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಸಭೆಯಲ್ಲಿ ತಿಳಿಸಿರುತ್ತಾರೆ.

ಶ್ರೀಮತಿ.ಉಷಾ:– ರವರು ಮಾತನಾಡಿ ರಾಮಮೂರ್ತಿನಗರ ಮುಖ್ಯ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಅಂಗಡಿಗಳನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದು , ಸಾರ್ವಜನಿಕರಿಗೆ ಓಡಾಡಲು ತೊಂದರೆ ಉಂಟಾಗುತ್ತಿದ್ದು ಕೂಡಲೆ ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಕೋರಿಕೊಂಡಿರುತ್ತಾರೆ.

ಕ್ರಮ:– ಸಹಾಯಕ ಅಭಿಯಂತರರು, ರವರು ಕೂಡಲೇ ಕ್ರಮವಹಿಸಲು ಸಭೆಯು ಸೂಚಿಸಿತು.

ಶ್ರೀಮತಿ.ಗೀತಾ ಪೂಜ ಗಾರ್ಡ್‌ನ್ :– ರವರು ಮಾತನಾಡಿ ಸದರಿ ರಸ್ತೆಯಲ್ಲಿ ಇದುವರೆವಿಗೂ ಪಾಲಿಕೆ ವತಿಯಿಂದ ಕೊಳವೆಸಾಲು ಅಳವಡಿಸಿ ಕುಡಿಯುವನೀರು ಒದಗಿಸದಿರುವ ಬಗ್ಗೆ ಕೂಡಲೇ ಕ್ರಮ ವಹಿಸಲು ಕೋರಿಕೊಂಡಿರುತ್ತಾರೆ. ಈ ಬಗ್ಗೆ ಸಂಬಂದಿಸಿದ ಅಬಿಯಂತರರು ಮಾತನಾಡಿ ಈಗಾಗಲೇ ಪಾಲಿಕೆ ವತಿಯಿಂದ ಪೂಜಗಾರ್ಡ್‌ನ್ ಹಾಗೂ ಕೆ. ಚನ್ನಸಂದ್ರ ಗ್ರಾಮದಲ್ಲಿ ಕೊಳವೆಬಾವಿಗಳನ್ನು ಕೊರೆಯಲಾಗಿದ್ದು, ವಿಫಲಗೊಂಡಿದ್ದು, ಸದರಿ ರಸ್ತೆಯಲ್ಲಿ ನೀರು ದೊರಕದೇ ಇರುವುದರಿಂದ ನೀರು ಒದಗಿಸಲು ಆಗಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಈ ಬಗ್ಗೆ ಇನ್ನಮ್ಮೆ ಪರಿಶೀಲಿಸಿ ಅಗತ್ಯ ಕ್ರಮ ವಹಿಸಲು ಕೋರಿಕೊಂಡಿರುತ್ತಾರೆ.

ಕ್ರಮ:– ವಾರ್ಡ್ ಅಭಿಯಂತರರಿಗೆ ಕೂಡಲೇ ಕ್ರಮವಹಿಸಲು ಸಭೆಯು ಸೂಚಿಸಿತು.

**ಶ್ರೀಮತಿ. ಶೈಲಜಾ:–** ರವರು ಮಾತನಾಡಿ ಕಾಮದೇನು ಬಡಾವಣೆಯಲ್ಲಿ ಕಸವನ್ನು ಸುರಿಯುತ್ತಿದ್ದು , ಬಡಾವಣೆಯಲ್ಲಿ ತುಂಬಾ ವಾಸನೆ ಬರುತ್ತಿದ್ದು ಇದರಿಂದ ಸಾರ್ವಜನಿಕರಿಗೆ ತುಂಬಾ ಕಷ್ಟಕರವಾಗಿದ್ದು ಕೂಡಲೆ ಈ ಬಗ್ಗೆ ಸಭೆಯಲ್ಲಿ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿ ಕೋರಿಕೊಂಡಿರುತ್ತಾರೆ.

ಕ್ರಮ:– ಹಿರಿಯ ಆರೋಗ್ಯ ಪರೀವಿಕ್ಷಕರು ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

**ಶ್ರೀ.ಆನಂದ್ ಇತರರು, ಪುಣ್ಯ ಭೂಮಿ ವೆಲ್‌ಫೇರ್ ಅಸೋಸಿಯೇಷನ್:–** ರವರು ಮಾತನಾಡಿ 7ನೇ ಮುಖ್ಯ ರಸ್ತೆಯ ಬೋರವೆಲ್‌ನಲ್ಲಿ ತುಂಬಾ ನೀರಿದ್ದು ,ಗೇಟ್ ವಾಲ್ ಅಳವಡಿಸಿ ಪ್ರತಿನಿತ್ಯ ಒಂದು ಗಂಟೆ 5ನೇ ಮುಖ್ಯ ರಸ್ತೆಗೆ ನೀರು ಬಿಡುವಂತೆ ಪಾಲಿಕೆ ಅಧಿಕಾರಿಗಳಿಗೆ ಕೋರಿಕೊಂಡಿರುತ್ತಾರೆ.

ಕ್ರಮ:– ಸಹಾಯಕ ಅಭಿಯಂತರರು, ರವರು ಸದರಿ ಸ್ಥಳ ಪರಿಶೀಲಿಸಿ ಸದರಿ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ಸಹಾಯಕ ಅಭಿಯಂತರರುಗಳು, ಬೃಹತ್ ರಸ್ತೆಗಳ ವಿಭಾಗ, ಸಹಾಯಕ ಅಭಿಯಂತರರು ಬೆಸ್ಕಾಂ–ದೂರವಾಣಿನಗರ, ಸಹಾಯಕ ಅಭಿಯಂತರರು ಬೆಂಗಳೂರು ಅಬಿವೃದ್ಧಿ ಪ್ರಾಧಿಕಾರ ರವರಿಗೆ ಈ ದಿನ ಸಭೆಗೆ ಹಾಜರಾಗಲು ಸೂಚಿಸಿದ್ದರೂ ಸಹ ಸದರಿ ರವರು ಗೈರುಹಾಜರಾಗಿದ್ದು, ಈ ಕುರಿತು ಸಾರ್ವಜನಿಕರು ಸಭೆಗೆ ಹಾಜರಾಗದ ಅಧಿಕಾರಿಗಳ ವಿರುದ್ಧ ಅಸಮಧಾನ ವ್ಯಕ್ತಪಡಿಸಿ ಮುಂದಿನ ಸಭೆಯಲ್ಲಿ ಎಲ್ಲರೂ ಹಾಜರಾಗಲೂ ಕ್ರಮಕೈಗೊಳ್ಳಲು ಕೋರಿಕೊಂಡಿದ್ದು, ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ನೋಡಲ್ ಅಧಿಕಾರಿ ರವರು ಸಭೆಯಲ್ಲಿ ನುರಿತ ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ಶ್ರೀ.ವಿಕ್ರಮ್ ಸಜ್ಜನ್ ಶೆಟ್ಟಿ
ಸಹಾಯಕ ಅಭಿಯಂತರರು ರಾಮಮೂರ್ತಿನಗರ ವಾರ್ಡ್
ಸಂಖ್ಯೆ–26 ಹಾಗೂ ಕಾರ್ಯದರ್ಶಿ ಮತ್ತು ಸಂಚಾಲಕರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನೋಡಲ್ ಅಧಿಕಾರಿ ವಾರ್ಡ್ ಸಂಖ್ಯೆ–26
(ಮಹದೇವಪುರ ವಲಯ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:–
1.ಕೌನ್ಸಿಲ್ ಕಾರ್ಯದರ್ಶಿ ರವರ ಅವಗಾಹನೆಗೆ ಮಂಡಿಸಲಾಗಿದೆ.
2.ಕಛೇರಿ ಪ್ರತಿ